ಹಂಪಿಯ ಪರಿಸರದಲ್ಲಿ ಪರಕೀಯರು ವಾಸಿಸುತ್ತಿರುವುದು

೧೪೯ (೩೨೮) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಹಂಪಿ ಪರಿಸರದಲ್ಲಿ ನೆಲೆಸಿರುವ ಪರಕೀಯರ ಸಂಖ್ಯೆ ಎಷ್ಟು ?

ಆ) ಸರ್ಕಾರಿ ನಿಯಮಾವಳಿಗೆ ವಿರೋಧವಾಗಿ ವಾಸಮಾಡುತ್ತಿರುವ ಹೊರದೇಶದ ನಾಗರೀಕರನ್ನು ಹೊರದೂಡಲು ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮಗಳೇನು ?

ಇ) ಹಂಪಿ ಪರಿಸರದಲ್ಲಿ ಆಮಲುಭರಿಸುವಂಥ ವಸ್ತುಗಳ ಮಾರಾಟ ಮಾಡುತ್ತಿರುವ ಮಾದಕ ವಸ್ತುಗಳ ನಿರ್ಭಂಧನೆಗಾಗಿ ಸರ್ಕಾರದವರು ಹಿಂಜರಿಯುತ್ತಿರುವುದಕ್ಕೆ ಕಾರಣವೇನು ?

ಈ) ಹಂಪಿಯ ಸಮೀಪದಲ್ಲಿ ಗುಡ್ಡದ ಮೇಲೆ ವಾಸಮಾಡುತ್ತಿರುವ ಮಾದಕ ಸೇವಿಸುವವರನ್ನು ಅಲ್ಲಿಂದ ಹೊರದೂಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಹಂಪಿ ಪರಿಸರದಲ್ಲಿ ಪರಕೀಯರು ನೆಲಸಿರುವುದಿಲ್ಲ.

ಆ) ಮೇಲಿನ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹಂಪಿ ಪರಿಸರದಲ್ಲಿ ಆಮಲು ಭರಿಸುವಂತ ಮಾದಕ ವಸ್ತುಗಳ ಮಾರಾಟದ ಬಗ್ಗೆ ಯಾವುದೇ ವಿಧವಾದ ದೂರು ಅಥವಾ ವರದಿ ಬಂದಿರುವುದಿಲ್ಲ.

ಈ) ಹಂಪಿಯ ಗುಡ್ಡದ ಮೇಲೆ ವಾಸಿಸುತ್ತಿರುವವರು ಮಾದಕ ವಸ್ತುಗಳನ್ನು ಸೇವಿಸುತ್ತಾರೆಂಬುದರ ಬಗ್ಗೆ ಯಾವುದೇ ದೂರು ಅಥವಾ ವರದಿ ಬಂದಿರುವುದಿಲ್ಲ. ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ.ಎಸ್. ಪಾಟೀಲ್.—ಅಧ್ಯಕ್ಷರೇ, ಹಂಪಿಯು ಐತಿಹಾಸಿಕ ಮಹತ್ವದ ವಿಜಯನಗರ ಸಾಮ್ರಾಜ್ಯದ ಸಾನಿಧ್ಯದಲ್ಲಿರತಕ್ಕಂಥ ಊರು. ಆದರೆ ಅಂತಹ ಸುಪ್ರಸಿದ್ಧವಾದ ಸ್ಥಳವನ್ನು, ಅದರ ಕೀರ್ತಿಯನ್ನು ಹಾಳುಮಾಡತಕ್ಕಂತಹ ಪ್ರಯತ್ನ ನಡೆದಿದೆ. ಅಲ್ಲಿ ಪರದೇಶಗಳಿಂದ ಬಂದಂತಹ ಪ್ರವಾಸಿಗಳು, ನೆಲೆಸಿ, ಮಾದಕ ವಸ್ತುಗಳನ್ನು ಮಾರಾಟಮಾಡುವುದು, ಮತ್ತು ಸೇವನೆ ಮಾಡುವುದು ಇತ್ಯಾದಿ ಅಕ್ರಮಚಟುವಟಿಕೆಗಳಲ್ಲಿ ತೊಡಗಿದ್ದಾರೆಂದು ತಿಳಿದುಬಂದಿದೆ. ಅಂತಹವರ ಹಿನ್ನೆಲೆ ಏನು ಎಂದು ತಮ್ಮನ್ನು ಕೇಳುತ್ತಿದ್ದೇನೆ, ಅಲ್ಲಿ ಮಾದಕ ವಸ್ತುಗಳ ವ್ಯಾಪಾರ ನಡೆಯುತ್ತಿರುವುದರ ಬಗ್ಗೆ ಪತ್ರಿಕೆಗಳಲ್ಲಿಯೂ ಕೂಡ ವರದಿ ಬಂದಿದೆ. ಅದರ ಬಗ್ಗೆ ತಾವುಗಳು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಹಾಗೂ ಇದುವರೆಗೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಹಂಪಿಯ ಗುಡ್ಡದ ಮೇಲೆ ವಾಸಿಸುತ್ತಿರುವವರು ಮಾದಕ ವಸ್ತುಗಳನ್ನು ಸೇವಿಸುತ್ತಾರೆಂಬುದರ ಬಗ್ಗೆ ಯಾವುದೇ ದೂರು ಅಥವಾ ವರದಿಗಳು ನಮಗೆ ಬಂದಿಲ್ಲ. ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದರೆ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ.ಎಸ್. ಪಾಟೀಲ್.—ಈ ವಿಷಯವನ್ನು ಕುರಿತು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ಕೂಡ ಬಂದಿರಬಹುದು. ಇಂತಹ ಗಂಭೀರ ಪ್ರಶ್ನೆಗೆ ಹಾರಿಕೆಯ ಉತ್ತರವನ್ನು ಕೊಟ್ಟರೆ ಆಗುವುದಿಲ್ಲ. ಹೀಗೆ ಪರದೇಶಗಳಿಂದ ಬರುವ ಮತ್ತು ಅಲ್ಲಿ ಈ ತೆರನಾದ ಚಟುವಟಿಕೆಗಳನ್ನು ಮಾಡುವವರ ಮೇಲೆ ಏನಾದರೂ ನೇರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಹಂಪೆಯ ಐತಿಹಾಸಿಕ ಮಹತ್ವದ ಬಗ್ಗೆ ನಮಗೆ ಅರಿವು ಇದೆ. ಆ ಸ್ಥಳದ ಪುನರುತ್ಥಾನದ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಐತಿಹಾಸಿಕ ಸ್ಥಳದ ಬಗ್ಗೆ ಅನೇಕ ಹೊಸ ಹೊಸ ಯೋಜನೆಗಳನ್ನು ಮಾಡುತ್ತಾ ಇದ್ದೇವೆ. ಅಲ್ಲಿ ಇಂತಹ ಚಟುವಟಿಕೆಗಳಿಗೆ ಅವಕಾಶ ಇಲ್ಲ. ಪತ್ರಿಕೆಗಳಲ್ಲಿ ಬಂದಿರುವುದು ನೂರಕ್ಕೆ ನೂರರಷ್ಟು ಸತ್ಯ ಎಂದು ಹೇಳುವುದಕ್ಕಾಗುವುದಿಲ್ಲ. ಆದರೂ ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ವಿಚಾರಣೆ ಮಾಡುತ್ತೇನೆ. ನಿಜ ಇದ್ದರೆ ಅಂತಹವರನ್ನು ಓಡಿಸುತ್ತೇವೆ.